

# ಫೌಂಡೇಷನ್ ಆಯ್ಕೆ ಹೇಗಿರಬೇಕು?

ಸೌಂದರ್ಯವರ್ಧಕಗಳಲ್ಲಿ ಫೌಂಡೇಷನ್ ಕ್ರೀಮ್ ಮತ್ತು ಕಾಂಪ್ಯಾಕ್ಟ್ ಪೌಡರ್‌ಗಳ ಪಾತ್ರ ಮಹತ್ವದ್ದು. ಯಾವುದೇ ಮೇಕಪ್ ಕಿಟ್‌ನಲ್ಲಿ ಫೌಂಡೇಷನ್ ಇದ್ದು, ಇದು ಮೇಕಪ್ ಪರಿಪೂರ್ಣಗೊಳ್ಳಲು ಸಹಕಾರಿಯಾಗುತ್ತದೆ.

■ ಯು.ವೇಣೂರು

ಸುಂದರವಾಗಿ ಕಾಣಬೇಕು ಎಂದು ಬಯಸುವ ಪ್ರತಿಯೊಬ್ಬ ಮಹಿಳೆಯ ಬಳಿಯೂ ಮೇಕಪ್ ಕಿಟ್ ಇದ್ದೇ ಇರುತ್ತದೆ. ಈ ಮೇಕಪ್ ಕಿಟ್‌ನ ಒಂದು ಪ್ರಮುಖ ಭಾಗ ಫೌಂಡೇಷನ್ ಕ್ರೀಮ್ ಅಥವಾ ಬೇಸ್ ಪೌಡರ್.

ತ್ವಚೆ ಹೊಳಪು, ನಯ ಮಾತ್ರವಲ್ಲದೆ ಆರೋಗ್ಯಪೂರ್ಣವಾಗಿಯೂ ಇರಬೇಕು. ಪದೇ ಪದೇ ಮೇಕಪ್ ಮಾಡುವ ಸಮಯ ಹಾಗೂ ತಾಳ್ಮೆ ಇಂದಿನವರಿಗೆ ಇಲ್ಲದೇ ಇರುವುದರಿಂದ ದೀರ್ಘ ಕಾಲ ಬಾಳಿಕೆ ಬರುವ ಫೌಂಡೇಷನ್ ಆಯ್ಕೆ ಮಾಡಿಕೊಳ್ಳುವುದು ಜಾಣತನ.

ಫೌಂಡೇಷನ್ ಕ್ರೀಮ್ ಅಥವಾ ಕಾಂಪ್ಯಾಕ್ಟ್ ಪೌಡರ್ ಮುಖದ ಮೇಕಪ್‌ನ ಮೊದಲ ಹಂತ. ಇದು ಅತ್ಯಂತ ಸಮರ್ಪಕವಾಗಿರಬೇಕು. ಬಣ್ಣಗಳ ಆಯ್ಕೆ, ಕ್ರೀಮ್‌ನ ಗುಣಮಟ್ಟ ಜತೆಗೆ ಅದನ್ನು ಬಳಸುವ ರೀತಿ.. ಹೀಗೆ ಎಲ್ಲದರಲ್ಲೂ ಪರಿಪೂರ್ಣತೆ ಸಾಧಿಸಿದರೆ ಮಾತ್ರ ಅದು ಮುಂದಿನ ಮೇಕಪ್‌ಗೆ ಪೂರಕವಾಗಿರುವುದು. ಇದು ಇಡೀ ಮೇಕಪ್‌ಗೆ ಭದ್ರ ಬುನಾದಿ ಹಾಕಿದ ಹಾಗೆ.

ಕಾಲಕ್ಕೆ ತಕ್ಕಂತೆ ಮೇಕಪ್‌ನಲ್ಲೂ ವ್ಯತ್ಯಾಸವಾಗುತ್ತದೆ. ಚಳಿಗಾಲದಲ್ಲಿ ಬಳಸುವ ಫೌಂಡೇಷನ್ ಮಳೆಗಾಲ ಅಥವಾ ಬೇಸಿಗೆಯ ಉಪಯೋಗಕ್ಕೆ ಯೋಗ್ಯವಲ್ಲ ಎನ್ನುತ್ತಾರೆ ಸೌಂದರ್ಯ ತಜ್ಞೆಯರು.

'ಚಳಿಗಾಲದಲ್ಲಿ ಮೇಕಪ್ ಮಾಡುವಾಗ ಬಳಸುವ ಫೌಂಡೇಷನ್ ಬಣ್ಣಗಳ ಆಯ್ಕೆ ನಾಜೂಕಾಗಿರಬೇಕು. ಉಡುಪಿಗೆ ಸೂಕ್ತವಾದ ಫೌಂಡೇಷನ್ ಆರಿಸಿಕೊಳ್ಳುವುದು ಒಳ್ಳೆಯದು. ಇದು ತ್ವಚೆಯ ಬಣ್ಣಕ್ಕೆ ಹೊಂದಿಕೊಂಡಿರಬೇಕು. ತಿಳಿಯಾದ ಅಥವಾ ಹಗುರವಾದ ಬಣ್ಣದ ಆಯ್ಕೆ ಒಳ್ಳೆಯದು' ಎಂದು ಸಲಹೆ ಮಾಡುತ್ತಾರೆ ಬಿಯು ಫೌಂಡೇಷನ್ ಕಂಪೆನಿಯ ಸೌಂದರ್ಯ ತಜ್ಞೆ ಅಲಿಕಾ ಡೋಮ್ಪೆಲ್ಡ್ ಅವರು.

'ದವಡೆಯ ಪಕ್ಕದಲ್ಲಿ (ಜಾ ಲೈನ್) ಫೌಂಡೇಷನ್ ಅನ್ನು ಹಚ್ಚಿಕೊಂಡು ಅದರ ಛಾಯೆಯನ್ನೂ ಗುರುತಿಸಿಕೊಳ್ಳಬಹುದು' ಎನ್ನುವ ಅವರು 'ಈ ಬಣ್ಣ ಕುತ್ತಿಗೆಯ ಬಣ್ಣದೊಂದಿಗೆ ಹೊಂದಿಕೊಳ್ಳುತ್ತದೆಯೇ ಎಂಬುದನ್ನು ಖಾತ್ರಿ ಮಾಡಿಕೊಳ್ಳಿ' ಎನ್ನುತ್ತಾರೆ.

'ಫೌಂಡೇಷನ್ ಖರೀದಿಸುವಾಗ ಗುಣಮಟ್ಟಕ್ಕೆ ಆದ್ಯತೆ ಕೊಡುವುದರ ಜತೆಗೆ ನೈಸರ್ಗಿಕ ವಸ್ತುಗಳನ್ನು ಬಳಸಿ ತಯಾರಿಸಿದ ಉತ್ಪನ್ನವನ್ನೇ ಬಳಸುವುದು ಒಳಿತು. ಚಳಿಗಾಲದಲ್ಲಿ ತಂಪು ಹೆಚ್ಚಾದಾಗ ತ್ವಚೆಗೆ ಸ್ವಲ್ಪ ಹೆಚ್ಚಿನ ಗಮನ ಅಗತ್ಯವಿರುತ್ತದೆ. ವಾತಾವರಣದ ತೇವಾಂಶದಿಂದಾಗಿ ತ್ವಚೆ ಬೇಗನೆ ಒಣಗುತ್ತದೆ. ಅಲ್ಲದೆ ಚರ್ಮ ಕೆಂಪಾಗುವ ಸಾಧ್ಯತೆ ಹೆಚ್ಚಿರುತ್ತದೆ. ಹೀಗಾಗಿ ಗುಣಮಟ್ಟಕ್ಕೆ ಮೊದಲ ಪ್ರಾಧಾನ್ಯತೆ ನೀಡುವುದು ಅನಿವಾರ್ಯ' ಎಂದು ಎಚ್ಚರಿಸುತ್ತಾರೆ ಅಲಿಕಾ.

'ತ್ವಚೆಯನ್ನು ನಯವಾಗಿಸಿ ಹೆಚ್ಚಿನ ಆರ್ದ್ರತೆ ನೀಡುವ ಫೌಂಡೇಷನ್, ಮೇಕಪ್ ಅನ್ನು ಪರಿಪೂರ್ಣವಾಗಿಸುತ್ತದೆ. ಇದರ ಜತೆಗೆ ದೀರ್ಘ ಬಾಳಿಕೆ ನೀಡುವ ಉತ್ತಮ ಪ್ರೈಮರ್ ಅನ್ನು ಬಳಸುವುದು ಒಳ್ಳೆಯದು. ಪ್ರೈಮರ್ ಮುಖ್ಯವಾಗಿ ತ್ವಚೆಯಲ್ಲಿರುವ ನಿರ್ಜೀವ ಕಣಗಳನ್ನು ಹೋಗಲಾಡಿಸುತ್ತದೆ ಅಲ್ಲದೆ ಚರ್ಮದಲ್ಲಿರುವ ರಂಧ್ರಗಳನ್ನು ಮುಚ್ಚುತ್ತದೆ. ಜತೆಗೆ ಇಲ್ಲಿರುವ ಸೂಕ್ಷ್ಮ ಗೆರೆಗಳನ್ನೂ ಮುಚ್ಚಿ ಉತ್ತಮ ಫಿನಿಶ್ ನೀಡುತ್ತದೆ' ಎಂಬುದು ಅಲಿಕಾ ಅವರ ಸಲಹೆ.

## ಕೆಲವೊಂದು ಟಿಪ್ಸ್

ಮೇಕಪ್‌ಗೆ ಮುನ್ನ ಪ್ರೈಮರ್ ಹಾಗೂ ಫೌಂಡೇಷನ್ ಬಳಸಿ

ನೈಜ ಹಾಗೂ ತ್ವಚೆಯ ತಾಜಾತನಕ್ಕಾಗಿ ಹೆಚ್ಚು ಆರ್ದ್ರತೆ ನೀಡುವ ಫೌಂಡೇಷನ್ ಆಯ್ಕೆ ನಿಮ್ಮದಾಗಿರಲಿ.

ಸಮೃದ್ಧ, ಪೋಷಕಾಂಶ ನೀಡುವ ವಸ್ತುಗಳು ಫೌಂಡೇಷನ್‌ನ ಭಾಗವಾಗಿರುವಂತೆ ನೋಡಿಕೊಳ್ಳಿ.

ತಿಳಿಯಾದ ಬಣ್ಣ ಸೂಕ್ತ.

ಸುಮಾರು ಎಂಟು ಗಂಟೆಗಳಷ್ಟು ದೀರ್ಘ ಬಾಳಿಕೆ ಬರುವ ಫೌಂಡೇಷನ್ ಅನ್ನೇ ಆರಿಸಿಕೊಳ್ಳಿ. ಇದರಿಂದ ಮೇಕಪ್ ಹಾಗೂ ಫೌಂಡೇಷನ್ ಅನ್ನು ಪದೇ ಪದೇ ಬಳಸುವ ಅಗತ್ಯವಿರುವುದಿಲ್ಲ. ಅಲ್ಲದೆ ಇದು ತ್ವಚೆಗೆ ಹೆಚ್ಚಿನ ಆರಾಮ ನೀಡುವುದು. ಇದರಿಂದ ತ್ವಚೆ ಹೊಳೆಯುತ್ತದೆ.

ಪೋಷಣೆಗಾಗಿ ವಿಟಮಿನ್ ಸಿ, ಶಿಯಾ ಬಟರ್ ಮತ್ತು ಪ್ಯಾಂಥೆನಾಲ್‌ಗಳನ್ನು ಹೊಂದಿರುವ ಫೌಂಡೇಷನ್ ಎಲ್ಲ ರೀತಿಯ ತ್ವಚೆಯವರಿಗೂ ಸೂಕ್ತವಾದದ್ದು.

ಮಾರುಕಟ್ಟೆಯಲ್ಲಿ ಪೈಪೋಟಿ ಹಾಗೂ ಅಧಿಕ ಲಾಭ ಗಳಿಸುವ ಹುನ್ನಾರದಿಂದ ಇಂದು ಸೌಂದರ್ಯವರ್ಧಕ ಕಂಪೆನಿಗಳು ಕಳಪೆ ಗುಣಮಟ್ಟದ ಫೌಂಡೇಷನ್ ಅನ್ನು ಕಡಿಮೆ ಬೆಲೆಯಲ್ಲಿ ಪೂರೈಸುತ್ತಿವೆ. ಇದರ ಬಳಕೆ ತ್ವಚೆಯ ಆರೋಗ್ಯಕ್ಕೆ ಪೂರಕವಾಗಿರುವುದಿಲ್ಲ. ಅಲ್ಲದೆ ಸೌಂದರ್ಯವೂ ಪರಿಪೂರ್ಣವಾಗಿರುವುದಿಲ್ಲ. ಸೌಂದರ್ಯ ತಜ್ಞರ ಸಲಹೆಯಂತೆ ಫೌಂಡೇಷನ್ ಹಾಗೂ ಮೇಕಪ್ ಸೆಟ್‌ಗಳನ್ನು ಬಳಸುವುದು ಒಳಿತು. ■